# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬೆಂಗಳೂರು ನಗರದ ಪೊಲೀಸ್ ಘಟಕದಲ್ಲಿ ಹೊಸದಾಗಿ ಮೂರು ಡಿಸಿಪಿ ಕಛೇರಿಗಳನ್ನು ಸೃಜಿಸುವ ಕುರಿತು.

**ಓದಲಾಗಿದೆ:**
ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರ ಪತ್ರ ಸಂಖ್ಯೆ: ಪಿ&ಸಿ(3)/20/2024-25, ದಿನಾಂಕ: 04/02/2025 ಮತ್ತು 19/06/2025.

**ಪ್ರಸ್ತಾವನೆ:**
ಮೇಲೆ ಓದಲಾದ ಪತ್ರಗಳಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ರಾಜ್ಯದ ರಾಜಧಾನಿಯಾಗಿರುವ ಬೆಂಗಳೂರು ನಗರವು ಮಾಹಿತಿ ಮತ್ತು ತಂತ್ರಜ್ಞಾನದ ಅತ್ಯಂತ ಪ್ರತಿಷ್ಠಿತ ಕೇಂದ್ರವಾಗಿದ್ದು, ದೇಶದ ನಾನಾ ಭಾಗಗಳಿಂದ ಉದ್ಯೋಗವನ್ನು ಅರಸಿ ನಾಗರೀಕರು ಬೆಂಗಳೂರಿಗೆ ಬರುತ್ತಿರುವುದರಿಂದ ನಗರವು ಎಲ್ಲಾ ದಿಕ್ಕುಗಳಲ್ಲಿ ವೇಗವಾಗಿ ಬೆಳೆಯುತ್ತಿದ್ದು, ಜನಸಂಖ್ಯೆಯೂ ಕೂಡ ಹೆಚ್ಚಾಗುತ್ತಿದ್ದು ನಗರೀಕರಣದೊಂದಿಗೆ ಅಪರಾಧ ಪ್ರಕರಣಗಳು ಕೂಡ ಹೆಚ್ಚಾಗುತ್ತಿದ್ದು ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು, ಕಳ್ಳತನ ಪ್ರಕರಣಗಳು ಮತ್ತು ಸೈಬರ್ ಕ್ರೈಂ ಪ್ರಕರಣಗಳು ನಗರದಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚುತ್ತಿದೆಂದು ತಿಳಿಸಿರುತ್ತಾರೆ.

2008ರ ಅಂತ್ಯದವರೆಗೆ ನಗರದಲ್ಲಿ ಜನಸಂಖ್ಯೆ ಮತ್ತು ಅಪರಾಧ ಪ್ರಕರಣಗಳಿಗನುಸಾರ 05 ಕಾನೂನು ಸುವ್ಯವಸ್ಥೆ ವಿಭಾಗಗಳು ಹಾಗೂ 02 ಸಂಚಾರ ವಿಭಾಗಗಳು ಅಸ್ತಿತ್ವದಲ್ಲಿದ್ದು, ವ್ಯಾಪ್ತಿಯು ಕ್ರಮೇಣ ವಿಸ್ತಾರವಾದ ಹಿನ್ನೆಲೆಯಲ್ಲಿ ಪ್ರಸ್ತುತ ಬೆಂಗಳೂರು ನಗರ ಪೊಲೀಸ್ ಘಟಕದ ಅಧೀನದಲ್ಲಿ 08 ಕಾನೂನು ಮತ್ತು ಸುವ್ಯವಸ್ಥೆ ಮತ್ತು 04 ಸಂಚಾರ ವಿಭಾಗಗಳು ಕಾರ್ಯನಿರ್ವಹಿಸುತ್ತಿವೆಂದು ತಿಳಿಸಿರುತ್ತಾರೆ.

ಬೆಂಗಳೂರು ನಗರದಲ್ಲಿ ಕಳೆದ 05 ವರ್ಷಗಳಲ್ಲಿ ದಾಖಲಾದ ಅಪರಾಧ ಪ್ರಕರಣಗಳ ಶೀರ್ಷಿಕೆವಾರು ವಿವರವನ್ನು ಕೆಳಕಂಡಂತೆ ಒದಗಿಸಿರುತ್ತಾರೆ.

| ಅಪರಾಧ ಪ್ರಕರಣ | 2020 | 2021 | 2022 | 2023 | 2024 |
|---|---|---|---|---|---|
| NDPS | 2766 | 4555 | 4026 | 3443 | 495 |
| IT Act | 8892 | 6422 | 9938 | 17631 | 17559 |
| Total IPS/BNS | 19852 | 21415 | 28478 | 41403 | 34506 |
| Total SLL | 14304 | 14895 | 17709 | 27117 | 23048 |
| **Grand Total** | **34156** | **36310** | **46187** | **68520** | **57554** |

ಬೆಂಗಳೂರು ನಗರದಲ್ಲಿ ಕಳೆದ 05 ವರ್ಷಗಳಲ್ಲಿ ದಾಖಲಾದ ಅಪರಾಧ ಪ್ರಕರಣಗಳ ವಿಭಾಗವಾರು ವಿವರವನ್ನು ಕೆಳಕಂಡಂತೆ ಒದಗಿಸಿರುತ್ತಾರೆ.

| ಕ್ರಮ ಸಂಖ್ಯೆ | ವಿಭಾಗ | 2020 | 2021 | 2022 | 2023 | 2024 |
|---|---|---|---|---|---|---|
| 1. | ಡಿಸಿಪಿ ಪೂರ್ವ ವಿಭಾಗ | 4699 | 5536 | 5826 | 7621 | 7234 |
| 2. | ಡಿಸಿಪಿ ಪಶ್ಚಿಮ ವಿಭಾಗ | 5840 | 6483 | 7124 | 10083 | 8741 |
| 3. | ಡಿಸಿಪಿ ಉತ್ತರ ವಿಭಾಗ | 5341 | 5387 | 6224 | 8768 | 7140 |
| 4. | ಡಿಸಿಪಿ ದಕ್ಷಿಣ ವಿಭಾಗ | 4758 | 5324 | 6582 | 8106 | 7206 |
| 5. | ಡಿಸಿಪಿ ಕೇಂದ್ರ ವಿಭಾಗ | 2146 | 2682 | 3468 | 4048 | 3415 |

prabhavaa.com

...2)

| | | | | | | |
|---|---|---|---|---|---|---|
| 6. | ಡಿಸಿಪಿ ವೈಟ್ ಫೀಲ್ಡ್ ವಿಭಾಗ | 4141 | 3231 | 3945 | 7372 | 8340 |
| 7. | ಡಿಸಿಪಿ ಆಗ್ನೇಯ ವಿಭಾಗ | 4311 | 3974 | 5294 | 8102 | 6839 |
| 8. | ಡಿಸಿಪಿ ಈಶಾನ್ಯ ವಿಭಾಗ | 2634 | 3371 | 4540 | 5899 | 5691 |

ಮುಂದುವರೆದು, ನಗರದಲ್ಲಿ ಸೈಬರ್ ವಂಚನೆ ಪ್ರಕರಣಗಳು ಗಣನೀಯವಾಗಿ ಹೆಚ್ಚಾಗುತ್ತಿರುವ ಕಾರಣ ಸೈಬರ್ ಕ್ರೈಂ ಪೊಲೀಸ್ ಠಾಣೆಯೊಂದಿಗೆ ಪ್ರತಿ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದಲ್ಲಿ ಒಟ್ಟು 8 CEN ಪೊಲೀಸ್ ಠಾಣೆಗಳನ್ನು ಸೃಜಿಸಲಾಗಿದ್ದು, 2016ನೇ ಸಾಲಿನಲ್ಲಿ ಬೆಂಗಳೂರು ನಗರದಲ್ಲಿ ಅಂದಾಜು 10 ಮಿಲಿಯನ್ ಜನಸಂಖ್ಯೆ ಇದ್ದು, ಪ್ರಸ್ತುತ 2024ನೇ ಸಾಲಿನಲ್ಲಿ ನಗರದ ಜನಸಂಖ್ಯೆಯು 14 ಮಿಲಿಯನ್ ಇರುತ್ತದೆಂದು ಹಾಗೂ ಜನಸಂಖ್ಯೆಯ ಆಧಾರದಲ್ಲಿ ನಗರವು ದೇಶದಲ್ಲಿ 3ನೇ ಸ್ಥಾನದಲ್ಲಿದೆ (ದೆಹಲಿ ಮತ್ತು ಮುಂಬೈ ಬಳಿಕ) ಎಂದು ತಿಳಿಸಿರುತ್ತಾರೆ. ಬೆಂಗಳೂರು ನಗರ ಪೊಲೀಸ್ ಕಾರ್ಯವ್ಯಾಪ್ತಿಯು ಗಣನೀಯವಾಗಿ ಹೆಚ್ಚಾಗಿದ್ದು, ಪ್ರಸ್ತುತ ನಗರದಲ್ಲಿ 111-ಕಾನೂನು ಮತ್ತು ಸುವ್ಯವಸ್ಥೆ, 53-ಸಂಚಾರ ಪೊಲೀಸ್ ಠಾಣೆಗಳು, 08-ಮಹಿಳಾ ಪೊಲೀಸ್ ಠಾಣೆಗಳು, 08-ಸಿ.ಇ.ಎನ್ ಪೊಲೀಸ್ ಠಾಣೆಗಳು ಮತ್ತು 01-ಸೈಬರ್ ಕ್ರೈಂ ಪೊಲೀಸ್ ಠಾಣೆ ಹೀಗೆ ಒಟ್ಟು 181-ಪೊಲೀಸ್ ಠಾಣೆಗಳು ಕಾರ್ಯನಿರ್ವಹಿಸುತ್ತಿದ್ದು ಇದರಿಂದಾಗಿ ವಿಭಾಗೀಯ ಡಿಸಿಪಿ ರವರುಗಳ ಕಾರ್ಯದೊತ್ತಡ ಅಧಿಕವಾಗಿರುತ್ತದೆಂದು ತಿಳಿಸಿರುತ್ತಾರೆ.

ನಗರದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವ ಅವಶ್ಯಕತೆ ಇದ್ದು, ಪ್ರಸ್ತುತ ಇರುವ ವಿಭಾಗಗಳ ವ್ಯಾಪ್ತಿಯು ವಿಸ್ತಾರವಾಗಿದ್ದು, ವಿಭಾಗಾಧಿಕಾರಿಗಳ ಕರ್ತವ್ಯವು ಒತ್ತಡಪೂರ್ಣವಾಗಿರುವುದರಿಂದ ಉಪ ಪೊಲೀಸ್ ಆಯುಕ್ತರು ತ್ವರಿತವಾಗಿ ಕ್ರಮ ಕೈಗೊಳ್ಳಲು ಕಷ್ಟಕರವಾಗಿರುವ ಹಿನ್ನಲೆಯಲ್ಲಿ ಬೆಂಗಳೂರು ನಗರಕ್ಕೆ ಆದ್ಯತೆ ಮೇರೆಗೆ ಹೆಚ್ಚುವರಿಯಾಗಿ 03 ಡಿಸಿಪಿ ದರ್ಜೆಯ ಅಧಿಕಾರಿಗಳ ಅವಶ್ಯಕತೆ ಇರುತ್ತದೆಂದು ತಿಳಿಸಿ, ವಿವರವನ್ನು ಕೆಳಕಂಡಂತೆ ಒದಗಿಸಿರುತ್ತಾರೆ.

**1) ಡಿಸಿಪಿ, ಕೆಂಗೇರಿ (ಡಿಸಿಪಿ, ನೈಋತ್ಯ ವಿಭಾಗ)**

ಡಿಸಿಪಿ ಪಶ್ಚಿಮ ವಿಭಾಗವು 04-ಎಸಿಪಿ ಉಪ ವಿಭಾಗಗಳು ಮತ್ತು 21-ಪೊಲೀಸ್ ಠಾಣೆಗಳನ್ನು ಒಳಗೊಂಡಿದ್ದು, ಪಶ್ಚಿಮ ವಿಭಾಗವು ಭೌಗೋಳಿಕವಾಗಿ ದೊಡ್ಡ ವಿಭಾಗವಾಗಿದ್ದು, ಕೆಂಗೇರಿ ಪ್ರದೇಶವು ನಗರದ ಹೊರವಲಯದಲ್ಲಿ ಅತಿ ತ್ವರಿತವಾಗಿ ಅಭಿವೃದ್ಧಿ ಹೊಂದುತ್ತಿದ್ದು, ಈ ಪ್ರದೇಶದಲ್ಲಿ ಬೆಂಗಳೂರು-ಮೈಸೂರು ಹೈವೇ ಎಕ್ಸ್‌ಪ್ರೆಸ್ ಕಾರಿಡಾರ್ ಇದ್ದು, ಬೆಂಗಳೂರು ವಿಶ್ವವಿದ್ಯಾಲಯ ಸರ್ಕಾರದ ಪ್ರಿಂಟಿಂಗ್ ಪ್ರೆಸ್ ಕಂಪನಿ, ಐಷರಾಮಿ ಹೋಟೆಲ್‌ಗಳು ಮತ್ತು ವಸತಿ ಕಟ್ಟಡಗಳು ನಿರ್ಮಾಣಗೊಂಡಿದ್ದು, ಸದರಿ ಪ್ರದೇಶದಲ್ಲಿ ಹೊಸದಾಗಿ ಉದ್ಯೋಗ ಸೃಷ್ಟಿಯಾಗಿರುವುದರಿಂದ ಗಣನೀಯವಾಗಿ ಜನಸಂಖ್ಯೆ ಹೆಚ್ಚಾಗಿದ್ದು, ಅಪರಾಧ ಪ್ರಕರಣಗಳ ಸಂಖ್ಯೆ ಕೂಡ ಹೆಚ್ಚಾಗುತ್ತಿರುತ್ತದೆ. ರಾಮನಗರ ಜಿಲ್ಲೆಯಿಂದ ಕೆಲವು ಪ್ರದೇಶಗಳು ಬೆಂಗಳೂರು ನಗರ ವ್ಯಾಪ್ತಿಗೆ ಸೇರ್ಪಡೆಯಾಗುವ ಸಾಧ್ಯತೆಯಿರುವ ಹಿನ್ನೆಲೆಯಲ್ಲಿ ಪ್ರತ್ಯೇಕ ಡಿಸಿಪಿ, ಕೆಂಗೇರಿ ವಿಭಾಗ ಕಛೇರಿ ಆರಂಭಿಸುವ ಅವಶ್ಯಕತೆ ಇರುತ್ತದೆಂದು ತಿಳಿಸಿರುತ್ತಾರೆ.

**2) ಡಿಸಿಪಿ, ಎಲೆಕ್ಟ್ರಾನಿಕ್ ಸಿಟಿ**

ಬೆಂಗಳೂರು ಹೊರವಲಯದ ಎಲೆಕ್ಟ್ರಾನಿಕ್ ಸಿಟಿ ಪ್ರದೇಶವು ವಿಶ್ವಮಟ್ಟದಲ್ಲಿ ಐಟಿ ಉದ್ಯಮದಲ್ಲಿ ಗುರುತಿಸಿಕೊಂಡಿದ್ದು, ಈ ಪ್ರದೇಶದಲ್ಲಿ ಐಟಿ ಉದ್ಯಮವು ಬೆಳೆದಂತೆ ಉದ್ಯಮಕ್ಕೆ ಅವಶ್ಯಕವಾಗಿ ಬೇಕಿರುವ ಮಾನವ ಸಂಪನ್ಮೂಲ, ಜನಸಂಖ್ಯೆಯ ಸಾಂದ್ರತೆ ಹೆಚ್ಚಾಗಿದ್ದು, ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ಸೃಷ್ಟಿಯಾಗಿದ್ದು, ಹೋಟೆಲ್‌ಗಳು ಗಣನೀಯವಾಗಿ ಏರಿಕೆಯಾಗಿರುತ್ತದೆಂದು ಹಾಗೂ ವಿವಿಧ

...3)

prabhavaa.com

ಇತರ ಉದ್ಯಮಗಳ ಸಂಖ್ಯೆ ಕೂಡ ಗಣನೀಯವಾಗಿ ಹೆಚ್ಚಾಗಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಐಟಿ ಕಂಪನಿಗಳ ಕಛೇರಿಗಳು ಈ ಪ್ರದೇಶದಲ್ಲಿ ಕಾರ್ಯಾರಂಭ ಮಾಡುವ ನಿರೀಕ್ಷೆ ಇರುವುದರಿಂದ ಬೆಂಗಳೂರು ನಗರದ ಎಲೆಕ್ಟ್ರಾನಿಕ್ ಸಿಟಿ ಪ್ರದೇಶದಲ್ಲಿ ಪ್ರತ್ಯೇಕ ಡಿಸಿಪಿ, ಎಲೆಕ್ಟ್ರಾನಿಕ್ ಸಿಟಿ ಕಛೇರಿಯನ್ನು ಆರಂಭಿಸುವುದು ಅತಿ ಅವಶ್ಯಕವಾಗಿರುತ್ತದೆಂದು ತಿಳಿಸಿರುತ್ತಾರೆ.

**3) ಡಿಸಿಪಿ, ಅಂತರಾಷ್ಟ್ರೀಯ ವಿಮಾನ ನಿಲ್ದಾಣ**

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ನಗರದ ಹೊರವಲಯದಲ್ಲಿದ್ದು, ಪ್ರಸ್ತುತ ಎರಡು ಟರ್ಮಿನಲ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪ್ರದೇಶದಲ್ಲಿ ವಿಮಾನ ನಿಲ್ದಾಣ ಕಾರ್ಯಾರಂಭವಾದ ಬಳಿಕ ಸುತ್ತಮುತ್ತಲಿನ ಪ್ರದೇಶ ಗಣನೀಯವಾಗಿ ಅಭಿವೃದ್ಧಿ ಹೊಂದಿದ್ದು, ಯಾವುದೇ ರೀತಿಯ ಅವಘಡಗಳು ಸಂಭವಿಸಿದಲ್ಲಿ, ಅನಿರೀಕ್ಷಿತ ಸಂದರ್ಭಗಳಲ್ಲಿ ತುರ್ತಾಗಿ ಮೇಲ್ವಿಚಾರಣಾ ಕ್ರಮಗಳನ್ನು ಕೈಗೊಳ್ಳಲು ಸಿಬ್ಬಂದಿಗಳನ್ನು ನಿಯೋಜಿಸಲು, ಕಾನೂನು ಮತ್ತು ಸುವ್ಯವಸ್ತೆ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿಡಲು ಡಿಸಿಪಿ, ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಕಛೇರಿಯ ಸೃಜನೆ ಅತಿ ಅವಶ್ಯಕವಾಗಿರುತ್ತದೆಂದು ತಿಳಿಸಿರುತ್ತಾರೆ.

ನಗರದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲು, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿಭಾಗಾಧಿಕಾರಿಗಳ ಕರ್ತವ್ಯದ ಒತ್ತಡವನ್ನು ಕಡಿಮೆಗೊಳಿಸಲು ಬೆಂಗಳೂರು ನಗರ ಪೊಲೀಸ್ ಘಟಕದಲ್ಲಿ ಹೆಚ್ಚುವರಿಯಾಗಿ 03 ಕಾನೂನು ಮತ್ತು ಸುವ್ಯವಸ್ಥೆ ವಿಭಾಗಗಳನ್ನು ಸೃಜಿಸುವುದು ಅವಶ್ಯಕವಾಗಿರುವುದಲ್ಲದೇ, 2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-461ರಲ್ಲಿ "ಬೆಂಗಳೂರು ನಗರದ ಪರಿಣಾಮಕಾರಿ ಪೊಲೀಸ್ ವ್ಯವಸ್ಥೆಗಾಗಿ ಈಗಿರುವ 08 ಪೊಲೀಸ್ ವಿಭಾಗಗಳನ್ನು 11ಕ್ಕೆ ಹೆಚ್ಚಿಸಲಾಗುವುದು" ಎಂದು ಘೋಷಿಸಿರುವಂತೆ ಪ್ರಸ್ತಾಪಿತ ಡಿಸಿಪಿ, ವಾಯುವ್ಯ ವಿಭಾಗ (NORTH WEST), ಡಿಸಿಪಿ, ನೈಋತ್ಯ ವಿಭಾಗ (SOUTH WEST) ಮತ್ತು ಡಿಸಿಪಿ, ಎಲೆಕ್ಟ್ರಾನಿಕ್ ಸಿಟಿ ವಿಭಾಗ (ELECTRONIC CITY) ವಿಭಾಗಗಳ ಸೃಜನೆಗೆ ಅವಶ್ಯವಿರುವ ಮಾಹಿತಿಯನ್ನು ಕೆಳಕಂಡಂತೆ ಒದಗಿಸಿರುತ್ತಾರೆ.

**<u>ಕಾರ್ಯಕಾರಿ ಹುದ್ದೆಗಳು:</u>**

| ಕ್ರ ಸಂ | ಘಟಕ | ಹುದ್ದೆಗಳು | | | | |
|---|---|---|---|---|---|---|
| | | ಡಿಸಿಪಿ | ಎಎಸ್‌ಐ | ಹೆಚ್‌ಸಿ | ಪಿಸಿ | ಒಟ್ಟು |
| 1. | ಡಿಸಿಪಿ, ವಾಯುವ್ಯ ವಿಭಾಗ (NORTH WEST) | 1 | 1 | 5 | 6 | 13 |
| 2. | ಡಿಸಿಪಿ, ನೈಋತ್ಯ ವಿಭಾಗ (SOUTH WEST) | 1 | 1 | 5 | 6 | 13 |
| 3. | ಡಿಸಿಪಿ, ಎಲೆಕ್ಟ್ರಾನಿಕ್ ಸಿಟಿ ವಿಭಾಗ (ELECTRONIC CITY) | 1 | 1 | 5 | 6 | 13 |

**<u>ಲಿಪಿಕ ಸಿಬ್ಬಂದಿಗಳ ವಿವರ</u>**

| ಕ್ರ ಸಂ | ಘಟಕ | ಹುದ್ದೆಗಳು | | | | | | |
|---|---|---|---|---|---|---|---|---|
| | | ಎಎಓ | ಎಸ್‌ಎಸ್ | ಪ್ರದಸ | ದ್ವಿದಸ | ಸ್ಟೆನೋ | ದಲಾಯತ್ | ಒಟ್ಟು |
| 1. | ಡಿಸಿಪಿ, ವಾಯುವ್ಯ ವಿಭಾಗ (NORTH WEST) | 1 | 1 | 3 | 4 | 1 | 1 | 11 |

...4)

prabhavaa.com

| | | | | | | | | |
|---|---|---|---|---|---|---|---|---|
| 2. | ಡಿಸಿಪಿ, ನೈಋತ್ಯ ವಿಭಾಗ (SOUTH WEST) | 1 | 1 | 3 | 4 | 1 | 1 | 11 |
| 3. | ಡಿಸಿಪಿ, ಎಲೆಕ್ಟ್ರಾನಿಕ್ ಸಿಟಿ ವಿಭಾಗ (ELECTRONIC CITY) | 1 | 1 | 3 | 4 | 1 | 1 | 11 |

ಈ ಹಿನ್ನೆಲೆಯಲ್ಲಿ ಮೂರು ಡಿ.ಸಿ.ಪಿ. ವಿಭಾಗಕ್ಕೆ ಅವಶ್ಯವಿರುವ ಹುದ್ದೆಗಳನ್ನು ಸೃಜಿಸಲು ವಾರ್ಷಿಕವಾಗಿ ಅಂದಾಜು ರೂ.5,18,49,402/-ಗಳ ಅವರ್ತಕ ವೆಚ್ಚ ಹಾಗೂ ರೂ.2,67,87,000/-ಗಳ ಅನಾವರ್ತಕ ವೆಚ್ಚ ತಗಲುವುದಾಗಿ ತಿಳಿಸಿ, ಪ್ರಸ್ತಾಪಿತ 03 ಡಿ.ಸಿ.ಪಿ. ಕಛೇರಿಗಳ ವ್ಯಾಪ್ತಿಗೆ ಒಳಪಡಿಸಲು ಉದ್ದೇಶಿಸಿರುವ ಪೊಲೀಸ್ ಠಾಣೆಗಳ ಹಾಗೂ ಉಪವಿಭಾಗಗಳ ಜನಸಂಖ್ಯೆ ಹಾಗೂ ಅಪರಾಧ ಪ್ರಕರಣಗಳ ವಿವರವನ್ನು ಕೆಳಕಂಡಂತೆ ಒದಗಿಸಿರುತ್ತಾರೆ.

ಪ್ರಸ್ತುತ ಇರುವ ಕೆಲವೊಂದು ವಿಭಾಗಗಳಿಗೆ ಹೆಚ್ಚಿನ ಕಾರ್ಯವ್ಯಾಪ್ತಿ ಮತ್ತು ಕಾರ್ಯದೊತ್ತಡ ಇರುವುದರಿಂದ, ಪ್ರಸ್ತಾಪಿತ 03 ಡಿ.ಸಿ.ಪಿ. ಹುದ್ದೆಗಳಿಗೆ ಹೊಸದಾಗಿ ವಿಭಾಗವನ್ನು ನೀಡಿ, ಹಾಲಿ ಇರುವ ವಿಭಾಗಗಳಿಂದ ಉಪವಿಭಾಗ ಮತ್ತು ಪೊಲೀಸ್ ಠಾಣೆಗಳನ್ನು ಪುನರ್ ವಿಂಗಡನೆಗೆ ಪ್ರಸ್ತಾಪಿಸಿರುತ್ತಾರೆ.

**<u>1) ಡಿಸಿಪಿ ವಾಯುವ್ಯ ವಿಭಾಗ (NORTH WEST)</u>**

| ಕ್ರ ಸಂ | ಉಪ ವಿಭಾಗ | ಪೊಲೀಸ್ ಠಾಣೆಗಳು | ವಿಸ್ತೀರ್ಣ (ಚ.ಕೀ.ಮೀ) | ಜನಸಂಖ್ಯೆ | ವರದಿಯಾದ ಅಪರಾಧ ಪ್ರಕರಣಗಳ ಸಂಖ್ಯೆ | | |
|---|---|---|---|---|---|---|---|
| | | | | | 2022 | 2023 | 2024 |
| 1. | ಎಸಿಪಿ ಪೀಣ್ಯ | 1. ಪೀಣ್ಯ | 8 | 500000 | 434 | 551 | 175 |
| | | 2. ರಾಜಗೋಪಾಲನಗರ | 6 | 500000 | 468 | 457 | 426 |
| | | 3. ಬಾಗಲಗುಂಟೆ | 5 | 550000 | 426 | 424 | 502 |
| | | 4. ಬ್ಯಾಡರಹಳ್ಳಿ | 28.1 | 334619 | 652 | 1047 | 834 |
| | | 5. ಸೋಲದೇವನಹಳ್ಳಿ | 77 | 275000 | 424 | 502 | 128 |
| | | 6. ಗಂಗಮ್ಮನಗುಡಿ | 6 | 86000 | 143 | 188 | 225 |

**<u>2) ಡಿಸಿಪಿ ನೈಋತ್ಯ ವಿಭಾಗ (SOUTH WEST)</u>**

| ಕ್ರ ಸಂ | ಉಪ ವಿಭಾಗ | ಪೊಲೀಸ್ ಠಾಣೆಗಳು | ವಿಸ್ತೀರ್ಣ (ಚ.ಕೀ.ಮೀ) | ಜನಸಂಖ್ಯೆ | ವರದಿಯಾದ ಅಪರಾಧ ಪ್ರಕರಣಗಳ ಸಂಖ್ಯೆ | | |
|---|---|---|---|---|---|---|---|
| | | | | | 2022 | 2023 | 2024 |
| 1. | ಕೆಂಗೇರಿ | 1. ಕೆಂಗೇರಿ | 20 | 450000 | 456 | 660 | 655 |
| | | 2. ಜ್ಞಾನಭಾರತಿ | 16.24 | 230000 | 348 | 484 | 547 |
| | | 3. ರಾಜರಾಜೇಶ್ವರಿನಗರ | 11.5 | 296510 | 367 | 539 | 389 |
| | | 4. ಕುಂಬಳಗೋಡು | 15 | 54240 | 376 | 430 | 384 |
| 2. | ಸುಬ್ರಮಣ್ಯ ಪುರ | 1. ತಲಘಟ್ಟಪುರ | 38 | 320000 | 311 | 480 | 527 |
| | | 2. ಸುಬ್ರಮಣ್ಯಪುರ | 14 | 360000 | 393 | 492 | 502 |
| | | 3. ಕುಮಾರಸ್ವಾಮಿ ಲೇಔಟ್ | 9 | 190000 | 367 | 433 | 396 |
| | | 4. ಕೋಣನಕುಂಟೆ | 22 | 450000 | 404 | 553 | 462 |

prabhavaa.com

...5)

## 3) ಡಿಸಿಪಿ ಎಲೆಕ್ಟ್ರಾನಿಕ್ ಸಿಟಿ (ELECTRONIC CITY)

| ಕ್ರ ಸಂ | ಉಪ ವಿಭಾಗ | ಪೊಲೀಸ್ ಠಾಣೆಗಳು | ವಿಸ್ತೀರ್ಣ (ಚ.ಕೀ.ಮೀ) | ಜನಸಂಖ್ಯೆ | ವರದಿಯಾದ ಅಪರಾಧ ಪ್ರಕರಣಗಳ ಸಂಖ್ಯೆ | | |
|---|---|---|---|---|---|---|---|
| | | | | | 2022 | 2023 | 2024 |
| 1. | ಎಲೆಕ್ಟ್ರಾನಿಕ್ ಸಿಟಿ | 1. ಎಲೆಕ್ಟ್ರಾನಿಕ್ ಸಿಟಿ | 11 | 350000 | 255 | 462 | 589 |
| | | 2. ಹುಳಿಮಾವು | 12.57 | 395000 | 320 | 608 | 555 |
| | | 3. ಬೇಗೂರು | 7.9 | 340000 | 330 | 485 | 422 |
| | | 4. ಪರಪ್ಪನ ಅಗ್ರಹಾರ | 20.3 | 350000 | 463 | 745 | 574 |
| | | 5. ಬಂಡೆಪಾಳ್ಯ | 3.4 | 200000 | 228 | 363 | 297 |
| | | 6. ಹೆಬ್ಬಗೋಡಿ | 29 | 350000 | 612 | 764 | 765 |

ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವಂತೆ 03 ಹೊಸ ವಿಭಾಗಗಳ ಸೃಜನೆಯ ಬಳಿಕ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿಭಾಗ, ಉಪವಿಭಾಗಗಳ ವ್ಯಾಪ್ತಿಯು ಕೆಳಕಂಡಂತೆ ಬದಲಾವಣೆಯಾಗಲಿದೆ ಎಂದು ತಿಳಿಸಿರುತ್ತಾರೆ.

## 1) ಪೂರ್ವ ವಿಭಾಗ

| ಕ್ರ ಸಂ | ಉಪ ವಿಭಾಗ | ಪೊಲೀಸ್ ಠಾಣೆಗಳು |
|---|---|---|
| 1. | ಪುಲಕೇಶಿನಗರ | 1. ಶಿವಾಜಿನಗರ<br>2. ಕಮರ್ಷಿಯಲ್ ಸ್ಟ್ರೀಟ್<br>3. ಪುಲಕೇಶಿನಗರ<br>4. ಭಾರತೀನಗರ<br>ಮಹಿಳಾ ಪೊಲೀಸ್ ಠಾಣೆ |
| 2. | ಹಲಸೂರು | 1. ಹಲಸೂರು<br>2. ಇಂದಿರಾನಗರ<br>3. ಜೀವನಭೀಮಾನಗರ<br>4. ಬೈಯ್ಯಪ್ಪನಹಳ್ಳಿ |
| 3. | ಬಾಣಸವಾಡಿ | 1. ರಾಮಮೂರ್ತಿನಗರ<br>2. ಬಾಣಸವಾಡಿ<br>3. ಹೆಣ್ಣೂರು |
| 4. | ಕೆ.ಜಿ.ಹಳ್ಳಿ | 1. ಕೆ.ಜಿ.ಹಳ್ಳಿ<br>2. ಡಿ.ಜೆ.ಹಳ್ಳಿ<br>3. ಗೋವಿಂದಪುರ |
| | ಸಿಇಎನ್ ಪೊಲೀಸ್ ಠಾಣೆ | |

## 2) ಪಶ್ಚಿಮ ವಿಭಾಗ

| ಕ್ರ ಸಂ | ಉಪ ವಿಭಾಗ | ಪೊಲೀಸ್ ಠಾಣೆಗಳು |
|---|---|---|
| 1. | ಚಿಕ್ಕಪೇಟೆ | 1. ಉಪ್ಪಾರಪೇಟೆ<br>2. ಕಲಾಸಿಪಾಳ್ಯ<br>3. ಸಿಟಿ ಮಾರ್ಕೆಟ್<br>4. ಚಾಮರಾಜಪೇಟೆ<br>5. ಕಾಟನ್‌ಪೇಟೆ |

...6)

prabhavaa.com

| | | |
|---|---|---|
| 2. | ಬ್ಯಾಟರಾಯನಪುರ | 1. ಬ್ಯಾಟರಾಯನಪುರ<br>2. ಅನ್ನಪೂರ್ಣೇಶ್ವರಿನಗರ<br>3. ಚಂದ್ರಾಲೇಔಟ್<br>4. ಜೆ.ಜೆ.ನಗರ |
| 3. | ವಿಜಯನಗರ | 1. ವಿಜಯನಗರ<br>2. ಕಾಮಾಕ್ಷಿಪಾಳ್ಯ<br>3. ಬಸವೇಶ್ವರನಗರ<br>4. ಗೋವಿಂದರಾಜನಗರ<br>(ಸರಸ್ವತಿನಗರ)<br>5. ಮಾಗಡಿ ರಸ್ತೆ<br>6. ಕೆ.ಪಿ.ಅಗ್ರಹಾರ<br><br>ಮಹಿಳಾ ಪೊಲೀಸ್ ಠಾಣೆ |
| | ಸಿಇಎನ್ ಪೊಲೀಸ್ ಠಾಣೆ | |

## 3) ಉತ್ತರ ವಿಭಾಗ

| ಕ್ರ ಸಂ | ಉಪ ವಿಭಾಗ | ಪೊಲೀಸ್ ಠಾಣೆಗಳು |
|---|---|---|
| 1. | ಯಶವಂತಪುರ | 1. ಯಶವಂತಪುರ<br>2. ಆರ್.ಎಂ.ಸಿ. ಯಾರ್ಡ್<br>3. ಜಾಲಹಳ್ಳಿ |
| 2. | ಮಲ್ಲೇಶ್ವರಂ | 1. ಮಲ್ಲೇಶ್ವರಂ<br>2. ಮಹಾಲಕ್ಷ್ಮಿಲೇಔಟ್<br>3. ರಾಜಾಜಿನಗರ<br>4. ಸುಬ್ರಮಣ್ಯನಗರ<br>5. ನಂದಿನಿ ಲೇಔಟ್<br>6. ಶ್ರೀರಾಂಪುರ<br><br>ಮಹಿಳಾ ಪೊಲೀಸ್ ಠಾಣೆ |
| 3. | ಜೆ.ಸಿ.ನಗರ | 1. ಜೆ.ಸಿ.ನಗರ<br>2. ಆರ್.ಟಿ. ನಗರ<br>3. ಸಂಜಯನಗರ<br>4. ಹೆಬ್ಬಾಳ |
| | ಸಿಇಎನ್ ಪೊಲೀಸ್ ಠಾಣೆ | |

## 4) ದಕ್ಷಿಣ ವಿಭಾಗ

| ಕ್ರ ಸಂ | ಉಪ ವಿಭಾಗ | ಪೊಲೀಸ್ ಠಾಣೆಗಳು |
|---|---|---|
| 1. | ಜಯನಗರ | 1. ಜಯನಗರ<br>2. ಜೆ.ಪಿ.ನಗರ<br>3. ಬನಶಂಕರಿ<br>4. ಬಸವನಗುಡಿ<br>5. ಸಿದ್ದಾಪುರ<br>6. ಪುಟ್ಟೇನಹಳ್ಳಿ |

...7)

prabhavaa.com

| | | |
|---|---|---|
| 2. | ವಿ.ವಿ.ಪುರಂ | 1. ವಿ.ವಿ.ಪುರಂ<br>2. ಶಂಕರಪುರಂ<br>3. ಕೆ.ಜಿ. ನಗರ<br>4. ಹನುಮಂತನಗರ<br>5. ಚನ್ನಮ್ಮನಕೆರೆ ಅಚ್ಚುಕಟ್ಟು<br>6. ಗಿರಿನಗರ<br><br>ಮಹಿಳಾ ಪೊಲೀಸ್ ಠಾಣೆ |
| | ಸಿಇಎನ್ ಪೊಲೀಸ್ ಠಾಣೆ | |

## 5) ಕೇಂದ್ರ ವಿಭಾಗ

| ಕ್ರ ಸಂ | ಉಪ ವಿಭಾಗ | ಪೊಲೀಸ್ ಠಾಣೆಗಳು |
|---|---|---|
| 1. | ಹಲಸೂರು ಗೇಟ್ | 1. ಹಲಸೂರು ಗೇಟ್<br>2. ಎಸ್.ಜೆ. ಪಾರ್ಕ್<br>3. ಎಸ್.ಆರ್.ನಗರ<br>4. ವಿಲ್ಸನ್‌ಗಾರ್ಡನ್<br><br>ಮಹಿಳಾ ಪೊಲೀಸ್ ಠಾಣೆ |
| 2. | ಶೇಷಾದ್ರಿಪುರಂ | 1. ಹೈಗ್ರೌಂಡ್ಸ್<br>2. ಸದಾಶಿವನಗರ<br>3. ವೈಯಾಲಿಕಾವಲ್<br>4. ಶೇಷಾದ್ರಿಪುರಂ |
| 3. | ಕಬ್ಬನ್‌ಪಾರ್ಕ್ | 1. ವಿಧಾನಸೌಧ<br>2. ಅಶೋಕನಗರ<br>3. ವಿವೇಕನಗರ<br>4. ಕಬ್ಬನ್‌ಪಾರ್ಕ್ |
| | ಸಿಇಎನ್ ಪೊಲೀಸ್ ಠಾಣೆ | |

## 6) ಆಗ್ನೇಯ ವಿಭಾಗ

| ಕ್ರ ಸಂ | ಉಪ ವಿಭಾಗ | ಪೊಲೀಸ್ ಠಾಣೆಗಳು |
|---|---|---|
| 1. | ಮಡಿವಾಳ | 1. ಕೋರಮಂಗಲ<br>2. ಮಡಿವಾಳ<br>3. ಹೆಚ್.ಎಸ್. ಆರ್.ಲೇಔಟ್<br>4. ಆಡುಗೋಡಿ<br><br>ಮಹಿಳಾ ಪೊಲೀಸ್ ಠಾಣೆ |
| 2. | ಮೈಕೋ ಲೇಔಟ್ | 1. ಮೈಕೋ ಲೇಔಟ್<br>2. ಬೊಮ್ಮನಹಳ್ಳಿ<br>3. ತಿಲಕನಗರ<br>4. ಸುದ್ದುಗುಂಟೆಪಾಳ್ಯ |
| | ಸಿಇಎನ್ ಪೊಲೀಸ್ ಠಾಣೆ | |

...8)

prabhavaa.com

## 7) ಡಿಸಿಪಿ ಈಶಾನ್ಯ

| ಕ್ರ ಸಂ | ಉಪ ವಿಭಾಗ | ಪೊಲೀಸ್ ಠಾಣೆಗಳು |
|---|---|---|
| 1. | ಸಂಪಿಗೆಹಳ್ಳಿ | 1. ಸಂಪಿಗೆಹಳ್ಳಿ<br>2. ಅಮೃತಹಳ್ಳಿ<br>3. ಕೊತ್ತನೂರು<br>4. ಬಾಗಲೂರು<br><br>ಮಹಿಳಾ ಪೊಲೀಸ್ ಠಾಣೆ |
| 2. | ಯಲಹಂಕ | 1. ಯಲಹಂಕ<br>2. ಯಲಹಂಕ ಉಪನಗರ<br>3. ಕೊಡಿಗೇಹಳ್ಳಿ<br>4. ವಿದ್ಯಾರಣ್ಯಪುರ |
| 3. | ದೇವನಹಳ್ಳಿ | 1. ದೇವನಹಳ್ಳಿ<br>2. ಚಿಕ್ಕಜಾಲ<br>3. ಕೆಐಎಎಲ್ |
| | ಸಿಇಎನ್ ಪೊಲೀಸ್ ಠಾಣೆ | |

## 8) ವೈಟ್‌ಫೀಲ್ಡ್ ವಿಭಾಗ

| ಕ್ರ ಸಂ | ಉಪವಿಭಾಗ | ಪೊಲೀಸ್ ಠಾಣೆಗಳು |
|---|---|---|
| 1. | ವೈಟ್‌ಫೀಲ್ಡ್ | 1. ವೈಟ್‌ಫೀಲ್ಡ್<br>2. ಕೆ.ಆರ್.ಪುರಂ<br>3. ಮಹದೇವಪುರ<br>4. ಕಾಡುಗೋಡಿ<br><br>ಮಹಿಳಾ ಪೊಲೀಸ್ ಠಾಣೆ |
| 2. | ಮಾರತ್ತಹಳ್ಳಿ | 1. ಮಾರತ್ತಹಳ್ಳಿ<br>2. ಹೆಚ್.ಎ.ಎಲ್<br>3. ಬೆಳ್ಳಂದೂರು<br>4. ವರ್ತೂರು<br>5. ಆವಲಹಳ್ಳಿ |
| | ಸಿಇಎನ್ ಪೊಲೀಸ್ ಠಾಣೆ | |

***ಉಪ ಪೊಲೀಸ್ ಆಯುಕ್ತರು, ಪೂರ್ವ, ಕೇಂದ್ರ, ಈಶಾನ್ಯ ಮತ್ತು ವೈಟ್‌ಫೀಲ್ಡ್ ವಿಭಾಗಗಳ ವ್ಯಾಪ್ತಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.**

ಈ ಹಿನ್ನೆಲೆಯಲ್ಲಿ ಪ್ರಸ್ತಾಪಿತ 03 ಕಾನೂನು ಸುವ್ಯವಸ್ಥೆ ವಿಭಾಗ ಕಛೇರಿಗಳ ಕಾರ್ಯನಿರ್ವಹಣೆಗೆ ಅಗತ್ಯವಿರುವ ವಿವಿಧ ದರ್ಜೆಯ 72 ಹುದ್ದೆಗಳನ್ನು ಸೃಜಿಸಿ, ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

...9)

prabhavaa.com

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 16 ಪಿಓಪಿ 2025,**
**ಬೆಂಗಳೂರು, ದಿನಾಂಕ: 08/ಜುಲೈ/2025.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-461 (i)ರಲ್ಲಿ ಘೋಷಿಸಿದಂತೆ ಬೆಂಗಳೂರು ನಗರದ ಪೊಲೀಸ್ ಘಟಕದಲ್ಲಿ ಹೊಸದಾಗಿ 03 ವಿಭಾಗಗಳಾದ ಡಿಸಿಪಿ, ವಾಯುವ್ಯ ವಿಭಾಗ (NORTH WEST), ಡಿಸಿಪಿ, ನೈಋತ್ಯ ವಿಭಾಗ (SOUTH WEST) ಮತ್ತು ಡಿಸಿಪಿ, ಎಲೆಕ್ಟ್ರಾನಿಕ್ ಸಿಟಿ ವಿಭಾಗ (ELECTRONIC CITY) ಗಳನ್ನು ಸೃಜಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 344 ವೆಚ್ಚ-11/2025, ದಿನಾಂಕ: 30/06/2025ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Vanaja K.N.
(ಕೆ.ಎನ್.ವನಜ) 8/7/25
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ).

8/7/2025

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಆಡಿಟ್-II), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2) ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನಂ.2, ನೃಪತುಂಗ ರಸ್ತೆ, ಬೆಂಗಳೂರು-560001.
4) ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು.
5) ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು.
7) ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
8) ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
9) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-11 ಮತ್ತು ಜಿ.ಪಂ), ವಿಧಾನ ಸೌಧ, ಬೆಂಗಳೂರು.
10) ಸರ್ಕಾರದ ವಿಶೇಷ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು), ವಿಧಾನಸೌಧ, ಬೆಂಗಳೂರು.
11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

prabhavaa.com